**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>**

**ಸಿಸಿ ನಂ. 12723/2020 ಚಾಸಾಃ 2 ಪ್ರಾಸಾಃ 3**

| | | |
|---|---|---|
| ಸಾಕ್ಷಿದಾರರ ಹೆಸರು | : | ಸುಬ್ರೂತ |
| ತಂದೆಯ ಹೆಸರು | : | ದಿವಕರ್ |
| ವಯಸ್ಸು | : | 29 ವರ್ಷ |
| ವೃತ್ತಿ | : | ಜ್ಯುವಲರಿ ಅಂಗಡಿಯಲ್ಲಿ ಕೆಲಸ |
| ವಾಸ | : | ನಗರ್ಥ ಪೇಟೆ, ಬೆಂಗಳೂರು |

**<u>ಸಾಕ್ಷಿಯನ್ನು ದಿಃ 16.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸ.ಸ.ಅ ರವರಿಂದಃ-</u>**

2015ನೇ ಇಸವಿಯಿಂದ ವಿಜಯ್ ಜೇಮ್ಸ್ ಅಂಡ್ ಜ್ಯುವಲರಿ ಕಂಪನಿ, ಗಾಂಧಿನಗರದಲ್ಲಿ ಕಲರ್ ಸ್ಟೋನ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆನು. ದಿಃ09.06.2020 ರಂದು ಪೊಲೀಸರು ಬಂದು ತನಿಖೆ ಮಾಡಿ ಲಾಪ್‌ಟಾಪ್ ನಲ್ಲಿ ಟೈಪ್ ಮಾಡಿಸಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿಯನ್ನು ನೋಡಿ ಗುರ್ತಿಸುತ್ತೇನೆ. ಆ ದಾಖಲೆ ಸ್ಥಳ ಮಹಜರು ಆಗಿದ್ದು ಅದನ್ನು ನಿಪಿ-3 ಎಂದು ಗುರ್ತಿಸಲಾಯಿತು. ನಿಪಿ-3 ರಲ್ಲಿರುವ ನನ್ನ ಸಹಿಯನ್ನು ನೋಡಿ ಗುರ್ತಿಸುತ್ತೇನೆ. ಅದನ್ನು ನಿಪಿ-3ಎ ಎಂದು ಗುರ್ತಿಸಲಾಯಿತು. ಆರೋಪಿ ವಿಜಯ್ ಜೇಮ್ಸ್ ಅಂಡ್ ಜ್ಯುವಲರಿ ಕಂಪನಿಯಲ್ಲಿ ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. 2018ನೇ ಇಸವಿಯಿಂದ ಆರೋಪಿಗೆ ಫೋನ್ ಕಾಲ್ ಮಾಡಿದರೂ ಕರೆ ಸ್ವೀಕರಿಸುತ್ತಿರಲಿಲ್ಲ. 2020 ರಲ್ಲಿ ಆರೋಪಿ ಕೆಲಸ ಮಾಡುತ್ತೇನೆ ಎಂದು ಹೇಳಿದಕ್ಕೆ ಕಂಪನಿಯಿಂದ 10 ಕೆ.ಜಿ. ಚಿನ್ನ ಕೊಟ್ಟರು. ಅದರಲ್ಲಿ 4.5 ಕೆ.ಜಿ ಚಿನ್ನವನ್ನು ಆರೋಪಿ ವಾಪಸ್ಸು ಕೊಟ್ಟಿಲ್ಲ. ಆರೋಪಿ ಚಿನ್ನವನ್ನು ಏನು ಮಾಡಿದ್ದಾರೆ ಗೊತ್ತಿಲ್ಲ. ಮಹಜರನ್ನು 10.00 ಗಂಟೆಯ ಸಮಯದಲ್ಲಿ ಬರೆದು ಕಂಪನಿಯಲ್ಲಿ ಸಹಿ ಪಡೆದಿದ್ದಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಹೆಚ್.ವಿ.ಎಸ್. ವಕೀಲರಿಂದಃ</u>**

ವಿಜಯ್ ಜೇಮ್ಸ್ ಅಂಡ್ ಜ್ಯುವಲರಿ ಕಂಪನಿ, ಗಾಂಧಿನಗರದಲ್ಲಿ 4 ಮಹಡಿಗಳಲ್ಲಿರುವ ಕಟ್ಟಡ ಎಂದರೆ ಸರಿ. 1ನೇ ಮಹಡಿಯಲ್ಲಿ ಸೇಲ್ಸ್ ಮತ್ತು ಕಚೇರಿ ಇದೆ ಎಂದರೆ ಸರಿ. 2ನೇ ಮಹಡಿಯಲ್ಲಿ ಮಾಲೀಕರ ಕಚೇರಿ ಮತ್ತು ಸಿಬ್ಬಂದಿಗಳ ಚಿನ್ನಾಭರಣವನ್ನು ತಯಾರಿಸಲು ಕೊಡಲು ಮತ್ತು ವಾಪಸ್ಸು ನೀಡುವ ಸ್ಥಳ ಎಂದರೆ ಸರಿ. ಯಾವುದೇ ಚಿನ್ನ ಅಥವಾ ವಜ್ರ ಮಾರಾಟ ಆದರೆ ಹಾಗೂ ಚಿನ್ನವನ್ನು ತಯಾರಿಸಲು ಕೊಟ್ಟರೆ ಕಂಪ್ಯೂಟರೈಸ್ ರಶೀದಿ ಮೇಲೆ ಸಹಿ ಪಡೆದು ಕೊಡುತ್ತಾರೆ ಎಂದರೆ ಸರಿ. ಪ್ರತಿ ದಿನ ಸಂಜೆ ಎಷ್ಟು ಚಿನ್ನ ಮಾರಾಟ ಆಗಿದೆ ಮತ್ತು ಎಷ್ಟು ಚಿನ್ನ ಇದೆ ಎಂಬ ಬಗ್ಗೆ ಬ್ಯಾಲೆನ್ಸ್ ಶೀಟ್ ನಲ್ಲಿ ನಮೂದಿಸಲಾಗುತ್ತದೆ ಎಂದರೆ ಸರಿ.  ಚಿನ್ನ ತಯಾರಿಕೆಗೆ ನೀಡಿದರೆ ಎಷ್ಟು ಚಿನ್ನ ಒಡವೆಗಳನ್ನು ತಯಾರಿಸಿ ಚಿನ್ನ ಕೊಟ್ಟಿದ್ದಾರೆ ಎಂದು ಬ್ಯಾಲೆನ್ಸ್ ಶೀಟ್ ನಲ್ಲಿ ನಮೂದಿಸಿ ಯಾರಿಗೆ ಕೊಡಲಾಗಿದೆ ಎಂದು ಸಹಿ ಪಡೆಯಲಾಗುತ್ತದೆ ಎಂದರೆ ಸರಿ. ಆ ಬಾಲೆನ್ಸ್ ಶೀಟ್ ಗಳು ನಮ್ಮ ಕಂಪನಿಯಲ್ಲಿ ಲಭ್ಯವಿದೆ ಎಂದರೆ ಸರಿ. ಒಟ್ಟು 250 ಕ್ಕಿಂತಲೂ ಹೆಚ್ಚು ಜನ ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಚಿನ್ನ ತಯಾರಿಕೆಯನ್ನು ಅಲ್ಲಿ ಸುಮಾರು 18 ವರ್ಷಗಳಿಂದಲೂ ಆರೋಪಿ ಮಾಡುತ್ತಿದ್ದಾರೆ ಎಂದರೆ ಸರಿ. ಆರೋಪಿ ಒಳ್ಳೆಯ ಚಿನ್ನದ ಅಭರಣಗಳನ್ನು ತಯಾರಿಸುತ್ತಾರೆ ಎಂಬ ಕಾರಣ ಅವರು ನಮ್ಮ ಕಂಪನಿಯಲ್ಲಿ ಇದ್ದರು ಎಂದರೆ ಸರಿ. ಅದೇ ಕಟ್ಟಡದ 4ನೇ ಮಹಡಿಯಲ್ಲಿ 40 ರಿಂದ 50 ಚಿನ್ನದ ಕುಶಲ ಕಾರ್ಮಿಕರನ್ನು ಹೊಂದಿ ಆಭರಣ ತಾಯಾರಿಕಾ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆರೋಪಿಗೆ ಮೇಕಿಂಗ್ ಚಾರ್ಜ್ ಕೊಡಲಾಗುತ್ತಿತ್ತು ಎಂದರೆ ಸರಿ. ಒಂದು ತಿಂಗಳಿಗೊಮ್ಮೆ ಆರೋಪಿಗೆ  ತಯಾರಿ ಮಾಡಿಕೊಡುತ್ತಿದ್ದ ಆಭರಣಗಳಿಗೆ ಮೇಕಿಂಗ್ ಚಾರ್ಜ್ ಅನ್ನು ಚೆಕ್ ಗಳ ಮೂಲಕ ಕೊಡಲಾಗುತ್ತದೆ ಎಂದರೆ ಸರಿ. ಆರೋಪಿ ಅವರದೇ ಆದ ತಯಾರಿಕ ಟೇಬಲ್ ಮತ್ತು ಟೂಲ್ಸ್ ಉಪಕರಣಗಳನ್ನು ಹೊಂದಿ ಚಿನ್ನದ ಆಭರಣ ತಯಾರಿಕೆ ಕೆಲಸ

ಮಾಡುತ್ತಿದ್ದರು ಎಂದರೆ ಸರಿ. ಆರೋಪಿ ಅವರಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ಚಿನ್ನದ ಆಭರಣಗಳನ್ನು ತಯಾರು ಮಾಡಿದ ಮೇಲೆ ಅದರ ವೇಸ್ಟೇಜ್ ಗೋಲ್ಡ್ ಅನ್ನು ನೀಡುತ್ತಿದ್ದರು ಎಂದರೆ ಸರಿ. ಕಾರ್ಮೀಕರಿಗೆ ವೇತನ ನೀಡುತ್ತಿರಲಿಲ್ಲ ಎಂದರೆ ಸರಿ. ಚಿನ್ನಾಭರಣ ಮಾಡಲು ನಮ್ಮ ಕಂಪನಿ ಚಿನ್ನವನ್ನು ನೀಡಿ ಅದರಲ್ಲಿ ವೇಸ್ಟೇಜ್ ಅನ್ನು ಆಭರಣಗಳಿಗೆ ತಕ್ಕಂತೆ ತೀರ್ಮಾನ ಮಾಡಿ ಕಾರ್ಮಿಕರಿಗೆ ನೀಡುತ್ತಿದ್ದರು ಎಂದರೆ ಸರಿ.

2020 ರಲ್ಲಿ ಆ ಕಟ್ಟಡದ ಕೆಲ ಮಹಡಿಯಲ್ಲಿ ರೆಸ್ಪೆಷನ್, ಸಿಸಿಟಿವಿ, ಥಂಬ್ ಪಂಚಿಂಗ್ ಮತ್ತು ಮೆಟಲ್ ಸ್ಕ್ಯಾನರ್ ಇದ್ದು ಯಾರೇ ಒಳಗಡೆ ಹೋಗಬೇಕಾದರೆ ಅಲ್ಲಿ ಪಂಚ್ ಮಾಡಲು ಹೋಗಬೇಕಿತ್ತು ಎಂದರೆ ಸಾಕ್ಷಿ ಹಾಜರಾತಿಗೋಸ್ಕರ ಥಂಬ್ ಪಂಚಿಂಗ್ ಇತ್ತು. ಸಿಸಿಟಿವಿ ಯು ಇತ್ತು, ಆದರೆ ಮೆಟಲ್ ಸ್ಕ್ಯಾನರ್ ಇರಲಿಲ್ಲ. ವಿಜಯ್ ಜೇಮ್ಸ್ ಅಂಡ್ ಜ್ಯುವಲರಿ ಕಂಪನಿ 2014 ನೇ ಇಸವಿಯಲ್ಲಿ ಗಾಂಧಿನಗರದಲ್ಲಿ ತೆರೆದಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ಆ ಜ್ಯುವಲರಿ ಕಂಪನಿಯ ಶಾಖೆಗಳು ಬೆಂಗಳೂರಿನಲ್ಲಿ ಬೇರೆ ಕಡೆ ಇದ್ದು ಅದನ್ನು ಮುಚ್ಚಿ ಗಾಂಧಿನಗರದಲ್ಲಿ ವಿಜಯ್ ಜೇಮ್ಸ್ ಅಂಡ್ ಜ್ಯುವಲರಿ ಕಂಪನಿ ತೆರೆಯಲಾಗಿದೆ ಎಂದರೆ ಸರಿ. ಆ ಕಟ್ಟಡ ನಮ್ಮ ಮಾಲೀಕರ ಸ್ವಂತದ್ದು ಎಂದರೆ ಸರಿ. ಕಟ್ಟಡ ಪ್ರಾರಂಭವಾದಾಗಲೇ ಸಿಸಿಟಿವಿ, ಥಂಬ್ ಪಂಚಿಂಗ್ ಮತ್ತು ಮೆಟಲ್ ಸ್ಕ್ಯಾನರ್ ಇತ್ತು ಎಂದರೆ ಮೆಟಲ್ ಸ್ಕ್ಯಾನರ್ ಇರಲಿಲ್ಲ ಎಂದು ಹೇಳುತ್ತಾರೆ. ಕಟ್ಟಡ ಪ್ರಾರಂಭವಾದಗಲೇ ಮೆಟಲ್ ಸ್ಕ್ಯಾನರ್ ಇದ್ದರೂ ಅದು ಇರಲಿಲ್ಲ ವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಿಂದೆ ಯಾರೇ ಕೆಲಸ ಮುಗಿಸಿ ಸಂಜೆ ಕಟ್ಟಡದಿಂದ ಹೊರಗೆ ಹೋಗಬೇಕಾದರೆ ಸ್ಕ್ಯಾನ್ ಮಾಡಿ ಹೊರಗಡೆ ಕಳುಹಿಸುತ್ತಿದ್ದರು ಎಂದರೆ ಸರಿಯಲ್ಲ. 2020 ರ ನಂತರ ಈಗ ಯಾರೇ ಕಟ್ಟಡದ ಒಳಗೆ ಬರಬೇಕಾದರೆ ಹಾಗೂ ಕೆಲಸ ಮುಗಿಸಿ ಸಂಜೆ ಕಟ್ಟಡದಿಂದ ಹೊರಗೆ ಹೋಗಬೇಕಾದರೆ ಸ್ಕ್ಯಾನ್ ಮಾಡಬೇಕು. 2014 ರಿಂದ 2017ನೇ ಇಸವಿಯವರೆಗೆ ಆಭರಣ ತಯಾರಿಕೆ ಕೆಲಸವನ್ನು ಮಾಡುತ್ತಿದ್ದರು ಎಂದರೆ ಸರಿ.

2017ರ ಕೊನೆಯಲ್ಲಿ ಆ ಕಟ್ಟಡದ 4ನೇ ಮಹಡಿಯಲ್ಲಿ ಆರೋಪಿ ಆಭರಣ ತಯಾರಿಕೆ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 2014ನೇ ಇಸವಿಯಲ್ಲಿ ಆ ಕಟ್ಟಡದ 3ನೇ ಮಹಡಿಯಲ್ಲಿ ಆರೋಪಿ ಆಭರಣ ತಯಾರಿಕೆ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆರೋಪಿ 4ನೇ ಮಹಡಿಗೆ ಹೋದ ನಂತರ ನಮ್ಮ ಜ್ಯುವೇಲರಿ ಅಂಗಡಿಯ ಮಾಲೀಕರು 3ನೇ ಮಹಡಿಗೆ ಬೆಂಗಾಲಿಯ ಆಭರಣ ತಯಾರಿಕೆಯವರನ್ನು ತಂದು ಕೆಲಸ ಮಾಡಲು ಬಿಟ್ಟಿದ್ದರು ಎಂದರೆ ಸರಿ. ಆಗ ಬೆಂಗಾಲಿಯವರಿಗೂ ಆಭರಣ ಮಾಡಲು ಚಿನ್ನ ಕೊಡುತ್ತಿದ್ದರು ಮತ್ತು ಆರೋಪಿಗೂ ಆಭರಣ ಮಾಡಲು ಚಿನ್ನ ಕೊಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಸ್ವತಃ ಬೇರೆ ಬೇರೆ ಚಿನ್ನವನ್ನು ಆರೋಪಿ ಮತ್ತು ಬೆಂಗಾಲಿಯವರಿಗೆ ಕೊಟ್ಟು ಬೇರೆ ಬೇರೆ ಆಭರಣಗಳನ್ನು ತಯಾರಿಸಲಾಗುತ್ತದೆ ಎಂದು ಹೇಳುತ್ತಾರೆ. ಬೆಂಗಾಲಿಯವರು ಬರುವ ಮುಂಚೆ ಎಲ್ಲಾ ಚಿನ್ನವನ್ನು ಆಭರಣ ತಯಾರು ಮಾಡಲು ಆರೋಪಿಗೆ ನೀಡುತ್ತಿದ್ದರು ಎಂದರೆ ಸರಿ. ಆಗ ಆರೋಪಿಗೆ ಬೇಸರವಾಗಿ ನಿಮ್ಮಲ್ಲಿ ಕೆಲಸ ಮಾಡುವುದಿಲ್ಲವೆಂದು ಬಿಟ್ಟು ಹೋಗಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಆರೋಪಿಗೆ ದಕ್ಷಿಣ ಭಾರತದ ಚಿನ್ನಾಭರಣ ಹಾಗೂ ಬೆಂಗಾಲಿವರೆಗೆ ಉತ್ತರ ಭಾರತದ ಚಿನ್ನಾಭರಣ ತಯಾರಿಕೆ ಕೆಲಸ ನೀಡಲಾಗುತ್ತಿತ್ತು ಎಂದು ಹೇಳುತ್ತಾರೆ.

ಯಾರೇ ಬಂದರೂ ರಿಸ್ಪಷನ್ ನಲ್ಲಿ ಉದ್ದೇಶ ಬರಸಿ ಮೇಲಿನ ಮಹಡಿಗಳಿಗೆ ಹೋಗಬೇಕು ಎಂದರೆ ಸರಿ. ಥಂಬ್ ಕೊಟ್ಟರೆ ಮಾತ್ರ ಲಿಫ್ಟ್ ನಲ್ಲಿ ಹೋಗುವುದಕ್ಕೆ ಸಾಧ್ಯ ಎಂದರೆ ಸರಿಯಲ್ಲ. ಯಾವುದೇ ಮಹಡಿಗೆ ಹೋಗಬೇಕಾದರೆ ಆ ಮಹಡಿಯಲ್ಲಿ ಯಾರು ಇಂಚಾರ್ಜ್ ಇರುತ್ತಾರೋ ಅವರ ಅನುಮತಿ ಪಡೆದು ಹೋಗಬೇಕು ಎಂದರೆ ಸರಿ. ಯಾವುದೇ ಮಹಡಿಗೆ ಯಾರು ಹೋದರು ಸಿಸಿಟಿವಿಯಲ್ಲಿ ರೆಕಾರ್ಡ್ ಆಗುತ್ತದೆ ಎಂದರೆ ಸರಿ. ಆ ಸಿಸಿಟಿವಿ ಫುಟೇಜ್ ನಮ್ಮ ಕಂಪನಿಯಲ್ಲಿ ಇರುತ್ತದೆ ಎಂದರೆ ಸರಿ. ಆ ಸಿಸಿಟಿವಿ ಫುಟೇಜ್ ನೋಡಿದರೆ ಯಾರು ಆ ದಿವಸ ಬಂದಿದ್ದಾರೆ ಮತ್ತು ಹೋಗಿದ್ದಾರೆ ಎಂದು ನೋಡಬಹುದು ಎಂದರೆ ಸರಿ.

ಕರೋನದ ಸಮಯದಲ್ಲಿ ಚಿನ್ನಾಭರಣ ತಯಾರಿಕೆ ಮತ್ತು ಮಾರಾಟ

ಮಾಡುತ್ತಿರಲಿಲ್ಲ ಎಂದರೆ ಸರಿ. ಕರೋನದ ಸಮಯದಲ್ಲಿ ವ್ಯವಹಾರವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು ಎಂದರೆ ಸರಿ. ಡಿಸೆಂಬರ್-2019 ಜುಲೈ-2020 ರವರೆಗೂ ಚಿನ್ನಾಭರಣ ಮಾರಾಟ ಆಗುತ್ತಿರಲಿಲ್ಲ ಎಂದರೆ ಸರಿ. ಸಾಕ್ಷಿ ಸ್ವತಃ ಆ ಸಮಯದಲ್ಲಿ ಅಲ್ಪ ಸ್ವಲ್ಪ ಚಿನ್ನಾಭರಣ ಅಗುತ್ತಿತ್ತು ಎಂದು ಹೇಳುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಚಿನ್ನದ ವಿಚಾರ ನನಗೆ ಮಾಲೀಕರು ಹೇಳಿದ್ದರಿಂದ ಗೊತ್ತಾಯಿತು ಎಂದರೆ ಸರಿ. ಮಾಲೀಕರು ಹೇಳುವವರೆಗೂ ಆ ವಿಚಾರ ಗೊತ್ತಿರಲಿಲ್ಲ ಎಂದರೆ ಸರಿ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ನಿಪಿ3 ರ ಮಹಜರಿನ ಒಕ್ಕಣೆ ಕನ್ನಡದಲ್ಲಿರುವುದರಿಂದ ಅದರಲ್ಲಿ ಏನು ಬರೆದಿದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ನಾನು ಮಾಲೀಕರ ಜೊತೆ ಉಪ್ಪಾರ ಪೇಟೆ ಪೊಲೀಸ್ ಠಾಣೆಗೆ 2-3 ಬಾರಿ ಹೋಗಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಪಂಚರಾಗಿ ಬರುವಂತೆ ನನಗ ಪೊಲೀಸರು ನೊಟೀಸು ಕೊಟ್ಟಿಲ್ಲ ಎಂದರ ಸರಿ. ಕಂಪನಿಯಲ್ಲಿ ನಾನು ಕೆಲಸ ಮಾಡುತ್ತಿರುವುದರಿಂದ ನನ್ನ ಮತ್ತು ಮಾಲೀಕರ ಸಂಬಂಧ ಚೆನ್ನಾಗಿದೆ ಎಂದರೆ ಸರಿ. ನಾನು ಮಹಜರಿಗೆ ಪೊಲೀಸ್ ಠಾಣೆಯಲಿಲ ಸಹಿ ಮಾಡಿದ್ದರೂ ಮಾಲೀಕರ ಮಾತನ್ನು ಕೇಳಿಕೊಂಡು ಕಂಪನಿಯಲ್ಲಿ ಮಹಜರಿಗೆ ಸಹಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2017 ರಲ್ಲಿ ಆರೋಪಿ ನಮ್ಮ ಕಂಪನಿ ಬಿಟ್ಟು ಹೋದ ನಂತರ ಬೆಂಗಳೂರಿನ ಸುಬ್ರಮಣ್ಯಪುರ ಸುರೇಶ್ ಎಂಬ ಜ್ಯುವೇಲರಿ ಎಂಬ ಅಂಗಡಿ ಇಟ್ಟುಕೊಂಡು ನಡೆಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಂದಿನಿಂದ ಆ ಶಾಪ್ ಅನ್ನು ಆರೋಪಿ ನಡೆಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)
**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**